ಕೆರೆಗಳಿಗೆ ನೀರು ತುಂಬಿಸುವುದು

871 (1283); ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನ ಸಭಾ ಕ್ಷೇತ್ರದ ಬೆಂಡವಾಡ ಮಾವಿನ ಕೊಂಡ, ಮಂಟೂರ, ಬೂದಿಹಾಳ, ದೇವನಕಟ್ಟಿ ಹಂಬರವಾಡಿ, ಜೋಡಟ್ಟಿ ಗಿರಿನಾಯಕವಾಡಿ, ಮೇಕಳಿ, ನಂದಿಕುರಳಿ ಹಾಗೂ ಚಿಕ್ಕೋಡಿ ತಾಲ್ಲೂಕು ಮತಕ್ಷೇತ್ರದಲ್ಲಿ ಕೆಂಚನಹಟ್ಟಿ ಮೀರಪುರ ಗ್ರಾಮಗಳಲ್ಲಿನ ಕೆರೆಗಳಿಗೆ ಕೃಷ್ಣ ನದಿಯ ಆಯ್ದ ಕೆರೆಗಳಿಗೆ ಎತ ನೀರಾವರಿ ಯೋಜನೆಯಡಿ ನೀರು ತುಂಬುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಕಾರ್ಯಗತಗೊಳಿಸಲಾಗುವುದು;

ಇ) ಸದರಿ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಹಾಗೂ ದನಕರುಗಳಿಗೆ ಮೇವಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನ ಸಭಾ ಕ್ಷೇತ್ರದ ಬೆಂಡವಾಡ ಮಾವಿನ ಕೊಂಡ, ಮಂಟೂರ, ಬೂದಿಹಾಳ, ದೇವನಕಟ್ಟಿ ಡಂಬರವಾಡಿ, ಜೋಡಟ್ಟಿ ಗಿರಿನಾಯಕವಾಡಿ, ಮೇಕಳಿ, ನಂದಿಕುರಳಿ ಹಾಗೂ ಚಿಕ್ಕೋಡಿ ತಾಲ್ಲೂಕು ಮತಕ್ಷೇತ್ರದಲ್ಲಿ ಕೆಂಚನಹಟ್ಟಿ ಮೀರಪುರ ಗ್ರಾಮಗಳಲ್ಲಿನ ಕೆರೆಗಳ ಪೈಕಿ ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನ ಸಭಾ ಕ್ಷೇತ್ರದ ಬೆಂಡವಾಡ ಮಾನಿನ ಹೊಂಡ, ಬೂದಿಹಾಳ, ದೇವನಕಟ್ಟಿ ಜೋಡಟ್ಟಿ ಗಿರಿನಾಯಕವಾಡಿ, ಮೇಕಳಿ, ನಂದಿಕುರಳಿ ಕೆರೆಗಳನ್ನು ಕೃಷ್ಣಾ ನದಿಯಿಂದ ನೀರನ್ನೆತ್ತಿ ತುಂಬಿಸುವ ಪ್ರಸ್ತಾವನೆಯು ಬಂದಿರುತ್ತದೆ.

ಆ) ಈ ಕೆರೆಗಳು ಜಿಲ್ಲಾ ಪಂಚಾಯತ್ ಹಾಗೂ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಡಿಯಲ್ಲಿ ಬರುತ್ತವೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ತಾಂತ್ರಿಕ ಕಾರ್ಯಸಾಧ್ಯತಾ ವರದಿ ತಯಾರಿಸಿ ಅದರನ್ವಯ ಮುಂದಿನ ಸೂಕ್ತ ಕ್ರಮ ವಹಿಸಲಾಗುವುದು.

ಇ) ಹೌದು, ಬಂದಿದೆ.

ಈ) ಈ ಕೆರೆಗಳು ಜಿಲ್ಲಾ ಪಂಚಾಯತ್ ಹಾಗೂ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಡಿಯಲ್ಲಿ ಬರುತ್ತವೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ತಾಂತ್ರಿಕ ಕಾರ್ಯಸಾಧ್ಯತಾ ವರದಿ ತಯಾರಿಸಿ ಅದರನ್ವಯ ಮುಂದಿನ ಸೂಕ್ತ ಕ್ರಮ ವಹಿಸಲಾಗುವುದು.

ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪಿಸುವುದು

872 (482); ಶ್ರೀ ಅಖಿಂಡ ಶ್ರೀನಿವಾಸಮೂರ್ತಿ ಆರ್

ಅ) ಪುಲಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಪಂಗಡದವರು ಹೆಚ್ಚಾಗಿದ್ದು, ಇಲ್ಲಿನ ಬಡ ವಿದ್ಯಾರ್ಥಿಗಳಿಗೆ ಕೈಗಾರಿಕಾ ತರಬೇತಿ ಕೇಂದ್ರ ಇಲ್ಲದಿರುವುದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರಿ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಕೈಗೊಂಡಿದ್ದಲ್ಲಿ ದೇವರ ಜೀವನಹಳ್ಳಿ ಸರ್ವೇ ನಂ 7ರ ಸರ್ಕಾರಿ ಜಾಗದಲ್ಲಿ ಸದರಿ ಕೇಂದ್ರವನ್ನು ಸ್ಥಾಪಿಸಲು ಸ್ಥಳಾವಕಾಶವಿರುವುದರಿಂದ ಸರ್ಕಾರ ಮಂಜೂರಾತಿ ನೀಡುವುದೇ? (ವಿವರ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಹೌದು, ಬಂದಿದೆ.